ದಿನಾಂಕ: 08.02.2021 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು
2. ಶ್ರೀ ಜಯಪ್ರಕಾಶ್, ಎಇಇ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
3. ಶ್ರೀ ಸೋಮಶೇಖರ್ ಸಹಾಯಕ ಅಭಿಯಂತರರು, (ಪ್ರಭಾರ) ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
4. ಶ್ರೀ ಬಿ.ಕೆ. ಶಂಕರ್‌ರಾವ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ಕೆ.ಸಿ. ದಿನೇಶ್, ಸಹಾಯಕ ಅಭಿಯಂತರರು , ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ ದೀಪಾ.ಜಿ. ಸಹಾಯಕ ಅಭಿಯಂತರರು , ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಯೋಜನೆ)
7. ಶ್ರೀ ಆನಂದ್.ವಿ.ಎನ್. ಎ.ಎಸ್.ಐ. ಸಂಚಾರಿ ಪೊಲೀಸ್ ಠಾಣೆ, ಕಾಮಾಕ್ಷಿಪಾಳ್ಯ.
8. ಶ್ರೀ ವೆಂಕಟೇಶ್, ಕಂದಾಯ ಇಲಾಖೆ
9. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು,
10. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಮಂಜುನಾಥ್, ತೋಟಗಾರಿಕೆ ಇಲಾಖೆ
12. ಶ್ರೀ ಅನಿಲ್ ರಂಗಣ್ಣ, ಸದಸ್ಯರು,
13. ಶ್ರೀ ರವೀಂದ್ರನಾಥ್, ಸದಸ್ಯರು,
14. ಶ್ರೀ ವಿನಾಯಕ ಸದಸ್ಯರು
15. ಶ್ರೀ ಸುಬ್ರಮಣಿ, ಸದಸ್ಯರು,
16. ಶ್ರೀ ರಾಜೇಶ್.ಎಂ. ಸದಸ್ಯರು,
17. ಶ್ರೀ ರಾಜೇಶ್.ಸದಸ್ಯರು,
18. ಶ್ರೀ ಅರವಿಂದ್, ಸದಸ್ಯರು
19. ಶ್ರೀ ಶ್ರೀನಿವಾಸ್.ಎ. ಸದಸ್ಯರು
20. ಶ್ರೀ ಗಂಗಯ್ಯ, ಸದಸ್ಯರು

ದಿನಾಂಕ: 16.01.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 08.02.2021ರಂದು ಬೆಳಗ್ಗೆ10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ ಎಸ್.ಬಿ.ಐ. ಆಫೀಸರ್ಸ್ ಸಮುದಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಅನಿಲ್‌ರಂಗಣ್ಣ ಸದಸ್ಯರು ಮಾತನಾಡುತ್ತಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಬ್‌ಲೇನ್ ವತಿಯಿಂದ ದೊಡ್ಡಗಾತ್ರದ ಪೈಪ್‌ಗಳನ್ನು ಅಳವಡಿಸುತ್ತಿದ್ದು, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಓಡಾಡಲು ಅನುವು ಮಾಡಿಕೊಡಬೇಕಾಗಿ ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಸದರಿ ಕಾಮಗಾರಿ ಸ್ಥಳದಲ್ಲಿ ಕಲ್ಲು ಬಂಡೆಗಳು ಸಿಕ್ಕಿರುವುದರಿಂದ ಕಾಮಗಾರಿಯು ನಿಧಾನವಾಗಿದ್ದು, ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

2. ಸಭೆಯಲ್ಲಿದ್ದ ಸಾರ್ವಜನಿಕರು ಮಾತನಾಡುತ್ತಾ, ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ಆಲದ ಮರ ಉದ್ಯಾನವದ ಹತ್ತಿರ ಚರಂಡಿಯ ಸ್ಲ್ಯಾಬ್‌ಗಳನ್ನು ತೆರವುಗೊಳಿಸಿದ್ದು, ಇದರಿಂದ ಉದ್ಯಾನವನಕ್ಕೆ ಬರುವ ನಾಗರೀಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬೆಸ್ಕಾಂ ಇವರು ಆದಷ್ಟು ಬೇಗಾ ಚರಂಡಿಯ ಸ್ಲ್ಯಾಬ್‌ಗಳನ್ನು ಮುಚ್ಚಿ ನಾಗರೀಕರಿಗೆ ಓಡಾಡಲು ಅನುವು ಮಾಡಿಕೊಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

Scanned by CamScanner

3. ಶ್ರೀನಿವಾಸ್ ಎಂಬುವವರು ಮಾತನಾಡುತ್ತಾ, ಶಾರದಾ ಕಾಲೋನಿ ಉದ್ಯಾನವನದ ಹತ್ತಿರ ಹಳೇಯ ವಾಹನಗಳನ್ನು ತುಂಬಾ ದಿನಗಳಿಂದ ನಿಲ್ಲಿಸಿದ್ದು, ಇದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ, ಎ.ಎಸ್.ಐ. ಸಂಚಾರಿ ಪೋಲಿಸ್ ಠಾಣೆ, ಕಾಮಾಕ್ಷಿಪಾಳ್ಯ ಇವರು ಸದರಿ ಹಳೇಯ ವಾಹನಗಳನ್ನು ತೆರವುಗೊಳಿಸುವುದು. ಲಾ ಅಂಡ್ ಆರ್ಡರ್ ರವರಿಗೆ ಸಂಬಂಧಿಸಿರುವುದರಿಂದ ಸದರಿ ರವರಿಗೆ ತಿಳಿಸಲು ಕೋರಿದರು.

4. ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಕೋವಿಡ್ ರೋಗಿಗಳ ಸಂಖ್ಯೆ ಇಳಿಮುಖವಾಗಿದ್ದು, ಜನವರಿ 29ರಿಂದ ಇದುವರೆವಿಗೂ ವಾರ್ಡಿನಲ್ಲಿ ಯಾವುದೇ ಕೋವಿಡ್ ರೋಗಿಯ ವಿವರಗಳು ದಾಖಲಾಗಿರುವುದಿಲ್ಲ.

5. ಶ್ರೀ ಅನಿಲ್ ರಂಗಣ್ಣ ಸಭೆಯಲ್ಲಿ ಮಾತನಾಡುತ್ತಾ, ಸಿದ್ದಯ್ಯ ಪುರಾಣಿಕ್ ರಸ್ತೆಯಿಂದ ಹೋಮಿಯೋಪತಿ ಆಸ್ಪತ್ರೆಯ ವರೆಗೆ ಬೆಸ್ಕಾಂ ವತಿಯಿಂದ ಟೆಂಡರ್ ಶ್ಯೂರ್ ರಸ್ತೆಯಲ್ಲಿ ಕೇಬಲ್ ಅಳವಡಿಸಿರುತ್ತಾರೆ. ಆದರೆ ಸದರಿ ರಸ್ತೆಯನ್ನು ದುರಸ್ಥಿ ಪಡಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ತಿಳಿಸಿ, ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

6. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು 46ನೇ ಕ್ರಾಸ್, ಎಸ್.ಬಿ.ಐ. ಕಾಲೋನಿ, ಇಲ್ಲಿ ಹಳೇಯ ಶಿಥಿಲವಾಗಿರುವ ಟ್ರಾನ್ಸ್‌ಫಾರ್ಮರ್ ಇದ್ದು, ಯಾವ ಸಮಯದಲ್ಲಾದರು ಬೀಳುವ ಸಂಭವವಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬೆಸ್ಕಾಂ ರವರು 15 ದಿನಗಳೊಳಗಾಗಿ ಸದರಿ ಕಂಬವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

7. ಕರೇಕಲ್ಲು 4ನೇ ಮತ್ತು 5ನೇ ಕ್ರಾಸ್ ಇಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ಕಸವನ್ನು ತೆಗೆಯಲು ವಾರಕ್ಕೆ ಒಂದು ಸಲ ಮಾತ್ರ ಆಟೋಗಳು ಬರುತ್ತಿರುವುದರಿಂದ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned by CamScanner